**IV Semester B.Sc. FAD Degree Examination, September/October-2022**
**ಕನ್ನಡ ಭಾಷಾ ಪಠ್ಯ- IV (CBCS Scheme Freshers) 26415**

**Time: 3 Hours.** **Paper: IV.** **Maximum Marks: 70**

**ಪ್ರಶ್ನೆ ಪತ್ರಿಕೆ ಸಿದ್ಧಪಡಿಸುವಿಕೆ**
ಭುವನೇಶ್ವರಿ. ಜಿ
ಕೆಎಲ್‌ಇ ಎಸ್. ನಿಜಲಿಂಗಪ್ಪ ಮಹಾವಿದ್ಯಾಲಯ
ರಾಜಾಜಿನಗರ,ಬೆಂಗಳೂರು
ಮೊ.ಸಂ:9980244914

**I ಈ ಕೆಳಗಿನವುಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ** **(5-2-10)**

1), ರಾಜ ಋಷಿಯ ಗರ್ವವನ್ನು ಮುರಿಯಲು ಚಿಂತಿಸಿದ ಬಗ್ಗೆ-

ಅಮ್ಮನಿರುವ ಕಂದ ತಬ್ಬಲಿಯಾಗಲು ಸಾಧ್ಯವಿಲ್ಲ ಎಂದು ರಾಜ ಋಷಿಯಾದ ಪರಶುರಾಮರು ಶಾಪವಿತ ಗಳಿಗೆಯಲ್ಲಿ ಹೇಳಬೇಕೆಂದಿದ್ದಾಗಿ ಕುಂತಿ ತಿಳಿಸುತ್ತಾಳೆ

2) ಕುರಿ ಮಾರನೇ ದಿನ ಬೆಳಗ್ಗೆ ಯಾರ ಕಾಲ ಬಳಿ ಇತ್ತು ?

ಕರಿಯ ಕುರಿ ಚಿಕ್ಕಪ್ಪನ ಬಾಡೂಟಕ್ಕೆ ಬಲಿಯಾಗಬಾರದೆಂದು ರಾತ್ರಿಯ ವೇಳೆಯಲ್ಲಿ ಬೆಟ್ಟದ ಬುಡದ ಪೊದೆ ಗಾಡಿಗೆ ಬಿಟ್ಟು ಬಂದರೆ ಬೆಳಗ್ಗೆ ನೀನೆ ನನ್ನ ಕರುಣಾಳು ಎಂದು ಚಿಕ್ಕಪ್ಪನ ಕಾಲಬಳಿ ಇತ್ತು

3) ಕರ್ಣಪಟಲಕ್ಕೆ ಬಡಿಯುವ ಸಂದೇಶಗಾನ ಯಾವುದು ?

ನಮ್ಮ ರಾಷ್ಟ್ರದ ವಿಶಾಲ ಆಕಾಶದಲ್ಲಿ ಪುಷ್ಪಕ ವಿಮಾನದ ಸದ್ದು ಬಡಿಯುತ್ತಿದೆ ಎಂದಿದ್ದಾರೆ ಚಂದ್ರಶೇಖರ ಪಾಟೀಲರು

4) ರುದ್ರ ಸರ್ಜರ ಕೊನೆಯ ಆಸೆ ಏನಾಗಿತ್ತು ?

ತನ್ನ ಕೊನೆಯ ದಿನಗಳನ್ನು ಕಿತ್ತೂರಿನಲ್ಲಿಯೇ ಕಳೆಯಬೇಕು ನನ್ನ ಪೂರ್ವಜರ ಸಮಾಧಿಗಳಿರುವ ಸ್ಥಳದಲ್ಲಿಯೇ ಕಲ್ಮಠದಲ್ಲಿಯೇ ಸಮಾಧಿ ಆಗಬೇಕು ಎಂಬ ಆಸೆಯನ್ನು ರುದ್ರಸರ್ಜರು ತೋಡಿಕೊಂಡರು

5), ಮೃಗ ವರ್ತಕನನ್ನು ಮನೆಗೆ ಕಳುಹಿಸಲು ಕಾರಣವೇನು ?

ನಿನ್ನ ಬದಲಾಗಿ ನಿನ್ನ ಮುದ್ದು ಮಗಳನ್ನು ತಂದು ನನಗೆ ಕೊಟ್ಟರೆ ನಿನ್ನನ್ನು ಕೊಲ್ಲುವುದಿಲ್ಲ ಎಂದು ಹೇಳಿತು

6) ಅವ್ವ ಕೊಂಬೆಗಳನ್ನು ಕಡಿಯಲು ಹೇಳಿದ ಉದ್ದೇಶವೇನು ?

ಮರದ ಗೊಂಬೆಗಳನ್ನು ಕಡಿದು ಬರೆದಾದ ತನ್ನ ಹೊಲದಲ್ಲಿ ನೆಡುವ ಸಲುವಾಗಿ ಹೇಳಿದರು

7) ಮಳೆಯ ನಡುವೆ ಮೂಡುವ ಸೂರ ಹೇಗೆ ಕಾಣುತ್ತಾನೆ ?

ಹನುಮನ ಎದೆಯಲ್ಲಿ ರಾಮ ಸೀತೆಯರು ಕಣ್ಣಿಗೆ ಹೊಳೆಯುವ ರೀತಿಯಲ್ಲಿ ಮಳೆಗಾಲದಲ್ಲಿ ಹಸಿರು ಮಧ್ಯಕ್ಕೆ ಸೂರ್ಯ ಸರ್ಚ್ ಲೈಟ್ ಕೆಡವುತ್ತಾನೆ

8).. ಮಳೆಯ ಮಗಳೆಂದು ಅಮ್ಮ ಕರೆಯಲು ಕಾರಣವೇನು ?

ಮಳೆಯ ದಿನಗಳಲ್ಲಿ ನೆನೆದು ಜ್ವರ ಒಂದು ಮಲಗಿದ್ದ ಕಾರಣ ಕಂಗಾಲಾಗಿದ್ದ ತಾಯಿ ನೀನು ನನ್ನ ಮಗಳು ಮಳೆಯ ಮಗಳು ಎಂದು ಪ್ರಶ್ನಿಸಿದ್ದಳು

**II ಈ ಕೆಳಗಿನವುಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಹತ್ತು ವಾಕ್ಯಗಳಲ್ಲಿ ಉತ್ತರಿಸಿ (4×5-20)**

1) ಯುಗಾದಿಗೆಂದು ಊರಿಗೆ ಬಂದ ಕಾವೇರಮ್ಮನ ಮಕ್ಕಳ ನಡೆಯನ್ನು ತಿಳಿಸಿ,

ತಾಯಿ ವಯಸ್ಸಾದ ಕಾರಣ ಕಡೆಗಾಲದಲ್ಲಿ ನಿಮ್ಮ ಜೊತೆ ಇರಬೇಕು ಎಂಬ ಇಚ್ಛೆ ವ್ಯಕ್ತಪಡಿಸಿದಾಗ ನಾಲ್ವರು ಸೊಸೆಯಂದಿರು ಮಾತನಾಡಿ ತಮ್ಮ ಗಂಡಂದಿರನ್ನು ಕರೆದು ಮಾತನಾಡಿದ ನಂತರ ಕಾವೇರಮ್ಮನ ಹಿರಿಯ ಮಗ ಬೆಂಗಳೂರಿಗೆ ತಾಯಿ ಹೊಂದಿಕೊಳ್ಳಲು ಕಷ್ಟವೆಂದು ಹೇಳಿ ತಿಂಗಳಿಗೆ ಒಂದಷ್ಟು ಹಣ ಕಳಿಸುವುದಾಗಿ ಹೇಳಿದರು

2) .ಕರಿಯನಿಗೆ ಕುರಿಗಳ ಜೊತೆ ಇದ್ದ ಒಡನಾಟವನ್ನು ಕುರಿತು ಬರೆಯಿರಿ.

ಕರಿಯ ಕೊಡುವ ಕುರುಕಲು ಕಾಲುಗಳಿಗೆ ಗುಂಟ ಕಿತ್ತುಕೊಂಡು ಬರುವಂತೆ ಸದ್ದು ಮಾಡಿ ಕರೆಯುವುದು ಶಾಲೆಯಿಂದ ಬಂದ ಕೂಡಲೇ ಅವುಗಳನ್ನು ಮುಟ್ಟಿ ಮುದ್ದಾಡುತ್ತಿದ್ದನು ರಜೆಯ ದಿನಗಳಲ್ಲಿ ಕುರಿಗಳನ್ನು ಹೊಲ ಮಾಲಕ್ಕೆ ಕರೆದುಕೊಂಡು ಹೋಗಿ ಮೇಯಿಸಿ ಸಂಜೆಗೆ ಕರೆತರುತ್ತಿದ್ದನು ಕುರಿಗಳ ಸಮೀಪವೇ ಮಲಗುತ್ತಿದ್ದನು ಅವು ಪ್ರಾಣಕ್ಕೆ ಸರಿಸಮವಾಗಿ ಹೊಂದಿಕೊಂಡಿದ್ದವು

3) ಗಾಂಧೀಜಿಯವರ ರಾಷ್ಟ್ರಕಲ್ಪನೆ ಕುರಿತು ಬರೆಯಿರಿ.

ಗಾಂಧೀಜಿಯವರ ರಾಷ್ಟ್ರ ಕಲ್ಪನೆಯು ಅರ್ಧನಾರೀಶ್ವರ ತತ್ವದ ಪ್ರತೀಕ ಮತ್ತು ಹೆಣ್ಣಿಗತನ ಎನ್ನುವುದು ಅಪಮಾನಕಾರಿ ಸಂಗತಿಯಲ್ಲ ಅದು ಮಾನವತೆಯ ಸಾರ ರೂಪ ಅಹಿಂಸೆ ಎನ್ನುವುದು ಶ್ರೇಷ್ಠ ಮೌಲ್ಯ ಎಂದಿದ್ದಾರೆ

4) ಹೊಲದ ಬಳಿ ಮರಕಡಿಯುತ್ತಿದ್ದ ಸಂದರ್ಭ ಬರೆಯಿರಿ.

ಹೊಲದಲ್ಲಿ ಮರ ಕಡಿಯುತ್ತಿದ್ದಾಗ ಚಂದ್ರಣ್ಣ ತಮ್ಮ ಎಂದು ಪರಿಚಯಿಸಿಕೊಂಡಾಗ ಅವರಲ್ಲೊಬ್ಬ ವ್ಯಕ್ತಿ ರೂ.15,000ದಂತೆ ಮಗ 20,000ದಂತೆ ಮರಗಳನ್ನು ಕೊಳ್ಳುತ್ತಿರುವುದಾಗಿ ತಿಳಿಸುತ್ತಾನೆ ಹೊಲದಲ್ಲಿ ಮರ ಕಡಿಯುತ್ತಿರಲು ಕಾರಣ ಇತ್ಯಾದಿಗಳನ್ನು ತಿಳಿಸುತ್ತಾ ಇದ್ದಾಗ ಅಷ್ಟರಲ್ಲಿ ದುರ್ಗದ ಶಮಿಲಿನ ಯಜಮಾನ ತಾತ್ಸಾರದಿಂದ ಚಂದ್ರನ ತಮ್ಮನ ಕುಶಲೋಪರಿ ನಡೆಸಿ ಅವರ ತಾಯಿಯ ಕುರಿತು ಆಸ್ಪತ್ರೆಗೆ ಹೊರಟ ಚಂದ್ರಣ್ಣನ ಬಗ್ಗೆ ಮಾಹಿತಿ ನೀಡುತ್ತಾನೆ

5) ಮಳೆಗಾಲದಲ್ಲಿ ಬರುವ ಹಬ್ಬಗಳ ವೈಶಿಷ್ಟ್ಯತೆಯನ್ನು ಕುರಿತು ಬರೆಯಿರಿ,

ಕಾರು ಹುಣ್ಣಿಮೆ ಪಂಚಮಿ ಶ್ರಾವಣದ ಕಾಲದಲ್ಲಿ ಕವಿಯನ್ನು ಬಾರೋ ಸಾಧನ ತೆರಿಗೆ ಎಂದು ಕರೆಯುವಂತೆ ಗಣೇಶ ಚತುರ್ಥಿ ಸಿ ಹುಣ್ಣಿಮೆ ಗೌರಿ ಹುಣ್ಣಿಮೆ ಹೀಗೇ ಅನೇಕ ಹಬ್ಬಗಳು ಈ ಸಂದರ್ಭದಲ್ಲಿ ಬರುತ್ತವ

6) ಮಳೆಗಾಲದಲ್ಲಿ ಪ್ರಾರಂಭವಾಗುವ ತರಗತಿಗಳ ಕುರಿತು ಬರೆಯಿರಿ.

ಜೂನ್ ತಿಂಗಳಲ್ಲಿ ಕಾಲೇಜು ಪ್ರಾರಂಭವಾಗಿ ವಿದ್ಯಾರ್ಥಿಗಳಿಗೆ ಸಿಲಬಸ್ಸರ್ಸುವ ಸಮಯಕ್ಕೆ ಮಳೆ ಶುರುವಾಗಿ ಮುದುಡಿ ಕುರಿತ ವಿದ್ಯಾರ್ಥಿನಿಯರು ಶಾಲೆಯ ಹೆಸರು ಇತ್ಯಾದಿ ಪಡೆದು ಮಳೆಯಲ್ಲಿ ಪ್ಲಾಸ್ಟಿಕ್ ಚೀಲದಲ್ಲಿ ಪುಸ್ತಕ ಹಿಡಿದು ಬರುವ ವಿದ್ಯಾರ್ಥಿಗಳ ಉತ್ಸಾಹದಿಂದ ಅಧ್ಯಾಪಕರು ಬರಬೇಕಾದ ಸಂದರ್ಭ

**III ಈ ಕಳಗಿನ ಮೂರು ಪ್ರಶ್ನೆಗಳಿಗೆ ಇಪ್ಪತ್ತು ವಾಕ್ಯಗಳಲ್ಲಿ ಉತ್ತರಿಸಿ (3×10-30)**

1). ಕಾವೇರಮ್ಮ ತಮ್ಮ ಮಕ್ಕಳಿಗಾಗಿ ಬದುಕನ್ನು ಮೀಸಲಿರಿಸಿದ ಸಂದರ್ಭವನ್ನು ವಿವರಿಸಿ

ಕಾವೇರಮ್ಮನ ಗಂಡನಾದ ಗಿರಿ ಗೌಡ ತೀರಿದ ನಂತರ 10 ವರ್ಷದ ದಾಂಪತ್ಯ ಕೊನೆಗೊಂಡು ಮರುಮದುವೆ ಆಗುವಂತೆ ಹಿರಿಯರು ಕೆಲವರು ತಿಳಿಸಿದಾಗ ನಿರಾಕರಿಸಿ ನಾಕು ಗಂಡು ಮಕ್ಕಳನ್ನು ಓದಿಸಿ ಸರ್ಕಾರಿ ನೌಕರಿ ಪಡೆದ ಮಕ್ಕಳ ಬಗ್ಗೆ ಹರ್ಷಿಸಿ ಕಡೆಗಾಲದಲ್ಲಿ ಒಬ್ಬೊಬ್ಬರ ಮನೆಯಲ್ಲಿ ಒಂದಷ್ಟು ದಿನವಿದ್ದರೆ ಸಾಕು ಎಂದುಕೊಳ್ಳುತ್ತಿರುವಾಗಲೇ ಯುಗಾದಿಗೆ ಬಂದ ಮಕ್ಕಳು ಅದನ್ನು ನಿರಾಕರಿಸುತ್ತಾರೆ ಸಿರಿವಂತಿಕೆಯ ಫಲವೋ ಎಂಬಂತೆ ಎದೆ ನೋವು ಕಾಣಿಸಿಕೊಂಡು ಬೆಂಗಳೂರಿನ ಜಯದೇವ ಆಸ್ಪತ್ರೆಗೆ ದಾಖಲಾಗುವ ಆಕೆಗೆ ವೈದ್ಯರಿಗೆ ಹಣ ಪಾವತಿಸಿ ಆಪರೇಷನ್ ಮಾಡುತ್ತಾರೆ ಮಕ್ಕಳು ಎರಡು ಲಕ್ಷ ಸಲುವಾಗಿ ಚರ್ಚೆ ನಡೆಸುತ್ತಾ ತಡವಾಗಿ ಬಂದು ಹಿರಿಯ ಮಗ ತಾಯಿಯನ್ನು ಕರೆದೊಯ್ಯಲು ನಿರಾಕರಿಸಿದಾಗ ಆಗ ಎಚ್ಚರವಾದ ಕಾವೇರಮ್ಮ ತಾನು ಸತ್ತರೆ ತನ್ನ ಹೆಣವನ್ನು ಆಸ್ಪತ್ರೆಗೆ ಮಾರಿ ಅದರಿಂದ ಬಂದ ಹಣವನ್ನು ಮಕ್ಕಳಿಗೆ ಹಂಚಬೇಕೆಂದು ಹೇಳಿ ಕೇಳಿಕೊಳ್ಳುತ್ತಾಳೆ

2) ಜನನಾಯಕ ಕೈಗೊಳ್ಳುವ ಸುಧಾರಣಾಶ್ರಮಗಳನ್ನು 'ಓ ನನ್ನ ದೇಶಬಾಂಧವರೇ' ಪದ್ಯದ ಹಿನ್ನೆಲೆಯಲ್ಲಿ ವಿವರಿಸಿ

ಓ ನನ್ನ ದೇಶ ಬಾಂಧವರೆ ಡಾ. ಚಂದ್ರಶೇಖರ ಪಾಟೀಲರ ಈ ಪದ್ಯದಲ್ಲಿ ರಾಜಕೀಯ ಬಿಡಂಬನೆಯನ್ನು ಕುರಿತ ಸಂಗತಿ ಇದೆ ಪ್ರಗತಿಯ ಹೆಸರಿನಲ್ಲಿ ರಾಜಕಾರಣಿಗಳು ಮಾಡುವ ದುಂದು ವೆಚ್ಚವನ್ನು ಕುರಿತು ತಿಳಿಸುತ್ತಾ ಜನರನ್ನು ವಂಚಿಸುವ ಕುರಿತು ಮಾರ್ನಿಂಗ್ ಆಡುತ್ತಾರೆ ವಿಶಾಲ ಆಕಾಶದಲ್ಲಿ ಪುಷ್ಪಕ ವಿಮಾನದಲ್ಲಿ ಬರುವ ವಿಶ್ವಾಮಿತ್ರ ಮೇಣಕ್ಯರನ್ನು ನೇರವಾಗಿ ಕಣ್ಣಿನಿಂದ ನೋಡಲು ಸಾಧ್ಯವಿಲ್ಲ ಹಸಿವಿನಿಂದ ಬಳಲುವ ನಿಮಗೆ ಅನ್ನವನ್ನು ಪ್ಯಾಕೇಟಿನಲ್ಲಿ ಮೇಲಿನಿಂದ ಸುರುವುತ್ತಾರೆ. ನಿಮ್ಮ ಹರಕು ಕುಡಿಸಲುಗಳನ್ನು ನೆಲಸಮ ಮಾಡಿ ಮೇಲಿನಿಂದಲೇ ಮನೆ ಎಸಿಯುತ್ತಾರೆ, ಜನರ ಆಗ್ರಹದ ಮೇಲೆ ಭೂಮಿಗೆ ಬರುವ ಇವರು ಇರುವ ಸಾಲಿನ ಉಪಾದಿಯಲ್ಲಿ ಕಾರಿನಲ್ಲಿ ಬಂದು ಒಂದೆರಡು ನಿಮಿಷಗಳ ಕಾಲ ಇದ್ದು ಇಲ್ಲಿಂದಲೇ ಹೊರಡುತ್ತಾರೆ ಟಾರು ರಸ್ತೆಯ ಮೇಲೆ ನಿಮ್ಮ ಪ್ರಗತಿಯ ಹೆಜ್ಜೆ ಗುರುತುಗಳನ್ನು ಹೀಗೆ ನೋಡಿರಿ ಎಂದಿದ್ದಾರೆ

3) ಅಗಲುವಿಕೆ: ಅಭಯವಾಗುವ ಬಗೆಯನ್ನು 'ವಿರಹೋತ್ಸವ' ಪದ್ಯದ ಹಿನ್ನೆಲೆಯಲ್ಲಿ ವಿವರಿಸಿ,

ಶೂನ್ಯವೇನ್ನುವುದಕ್ಕೆ ಅಸ್ತಿತ್ವ ಇಲ್ಲವೆನ್ನುವ ಹೇಮಾ ರವರು ಹೇಗೆ ಗಾಳಿಯಾಡದ ನೆಲ ಜಗವಿಲ್ಲವೂ ಹಾಗೆಯೇ ಅಗಲಿಕೆ ಅರಿಯದ ಮನಸ್ಸಿಲ್ಲ ಸುಖವನ್ನು ಸರಿಸಿ ವಿರಹದ ಗರಗಸ ನಮಗೆ ತಟ್ಟದೇ ಬಿಟ್ಟಿಲ್ಲ ಇದು ವ್ಯಕ್ತ ಅನುಭವ ಅಗಲಿಕೆಯ ಭವದ ಆದಿ ಒಂದು ಅಗಲಿಕೆ ಮತ್ತೊಂದರ ಉಯದ ಸಂಕೇತ ಚಿಗುರು ಗೊನೆಯ ಕೊನೆ ಹೀಗಾಗಿ ಹಗಲುವಿಕೆ ಖಂಡಿತ ಅವು ಅಭಯ ಎಂದಿದ್ದಾರೆ

4) 'ಮೃಗವನ್ನು ಸುಂದರಿ ಮದುವೆಯಾಗಲು ಒಪ್ಪಿದ ಸಂದರ್ಭ ವಿವರಿಸಿ,

ವರ್ತಕನ ಮಗಳನ್ನು ಅರಣ್ಯದ ಬಂಗಲೆಯಲ್ಲಿರುವ ಬಿರುಗಾದ ಬಳಿ ಕರಾರಿನಂತೆ ಕಳುಹಿಸಿದ ನಂತರ ಮೃಗ ಸುಂದರಿ ಸಕಲ ಸೌಲಭ್ಯಗಳನ್ನು ಒದಗಿಸಿ ಸುಂದರಿಯ ಗ್ರಹವನ್ನು ನಿರ್ಮಿಸಿರುತ್ತಾನೆ ಅಲ್ಲಿ ಸುಂದರಿ ಈತನ ನೀಡಿದ ಮೃಷ್ಟಾನ್ನ ಭೋಜನವನ್ನು

ಸುಂದರಿ ಸ್ವೀಕರಿಸುವಾಗ ಅವಳ ಅನುಮತಿ ಕೋರಿ ಅವಳು ಎನ್ನುವ ಸಮಯದಲ್ಲಿ ಬಂದು ಕೂರುತ್ತಾನೆ ಅದರ ಕುರೂಪವನ್ನು ನಿರ್ಭಯವಾಗಿ ಹೇಳುವ ಸುಂದ ಸುಂದರಿ ಅದರ ಗುಣವನ್ನು ಮೆಚ್ಚುತ್ತಾಳೆ. ಸುಂದರಿ ಊಟ ಮುಗಿಸುವಾಗ ತನ್ನನ್ನು ಮದುವೆಯಾಗುವಂತೆ ಕೇಳಿದಾಗ ನಿರಾಕರಿಸುತ್ತಾಳೆ ಮೃಗ ಸಿಟ್ಟಿನಿಂದ ಬಸ್ಸುಗುಟ್ಟಿ, ಸರಿ ಎಂದು ಹೇಳಿ ಹೊರಟಿತ್ತು ಆ ದಿನದ ನಂತರ ಸಂಗೀತ ಕೇಳುವಾಗ ಅವಳ ಜೊತೆ ಮಾತಾಡುವಾಗ ಕೊನೆಯಲ್ಲಿ ತನ್ನನ್ನು ಮದುವೆಯಾಗು ಎಂದು ಕೇಳುವುದು ನಿರಾಕರಿಸುವುದು ನಡೆದೇ ಇತ್ತು ಕೊನೆಗೆ ತಂದೆಯ ಮನೆಯಲ್ಲಿ ನಿರ್ದಿಷ್ಟ ದಿನದವರೆಗೆ ಅನುಮತಿ ಪಡೆದು ಹೊರಟು ಅಲ್ಲಿನ ಜನರ ಕುಯುಕ್ತಿ ಕಂಡು ಮರಳಿ ಬಂದು ತಾನು ಮೃಗವನ್ನು ಮದುವೆಯಾಗುವುದಾಗಿ ಹೇಳುತ್ತಾಳೆ ಆಗ ಮೃಗದ ಆಕಾರ ಬದಲಾಗಿ ಸುಂದರ ರಾಜಕುಮಾರನಾಗಿ ಬದಲಾಗಿ ದೇವತೆ ನೀಡಿದ ಶಾಪ ಕುರಿತು ಹೇಳುತ್ತಾನೆ

5) ಧಾರವಾಡದಲ್ಲಿ ಸುರಿದ ಮಳೆಯ ಕುರಿತು ಕಣವಿಯವರು ಏನು ಹೇಳಿದ್ದಾರೆ ? ವಿವರಿಸಿ,

ಮಳೆಯ ನೀರು ತೆನೆ ತೆನೆಯನ್ನು ಜಡಿಯುವಂತೆ ಒಂದೇ ಸಮನೆ ಸುರಿದು ಬೆಳೆ ಕೊಯ್ಯಲು ಮೋಡದ ಒಕ್ಕಲು ಮತ್ತೆ ಸೋನೆಯ ರಾಶಿ ಮಾಡುತ್ತಿದೆ ಧಾರವಾಡದ ಮಳೆಯಾದರೂ ಮಸ್ಲಿನ್  ಪರದೆಯಷ್ಟು ತೆಳ್ಳಗೆ ಸುರಿಯುತ್ತಿದೆ, ಹೂಬಿಸಿಲ ಕಾರಣ ದೂರದ ಪ್ರಯಾಣ ಬೆಳೆಸಿದವರು ಇಂದು ಬಂದರೆ ಎಂದು ನಿರೀಕ್ಷಿಸಬಹುದು ದೂರ ದೇಶದ ಯಾತ್ರಿಕರ ರೀತಿಯಲ್ಲಿ ಮೋಡದ ಬಸ್ಸು ತುಂಬಿ ಜಾತ್ರೆಯ ರೀತಿಯಲ್ಲಿ ಏಳುಕೊಳ್ಳಗಳು ಬಾಗಿದೆ. ಗಾಳಿಯು ಏನೋ ಕಳೆದುಕೊಂಡು ಹುಡುಕುವ ತೆರದಿ ಮಂಜಿನ ಕಿಟಕಿ ಬಾಗಿಲುಗಳಲ್ಲಿ ನುಗ್ಗಿವೆ. ನೂಲನ್ನು ನೂಲುವ ತೆರದಿ ಮೋಡವು ಬಿಳಿಯ ದಾರದ ರೀತಿಯಲ್ಲಿ ಧಾರಾಕಾರ ಮಳೆ ಸುರಿಸಿ ಗದ್ದೆ ಹೊಲ ತೋಟಗಳಿಗೆ ಆಗಮಿಸಿದೆ ರಾಮ ಸೀತೆಯರು ಹನುಮನ ಎದೆಯಲ್ಲಿ ನೆಲೆಸಿ ಕಂಗೊಳಿಸುವಂತೆ ಆಗೊಮ್ಮೆ ಈಗೊಮ್ಮೆ ಸೂರ್ಯನ ಬಿಸಿಲು ಕಾಣುವುದು ಗಣೇಶ ಗೌರಿ ಕಾರ ಹುಣ್ಣಿಮೆ ನಾಗರ ಪಂಚಮಿ ಹೀಗೆ ಹಬ್ಬಗಳ ಸಾಲು ಈ ಮಳೆಯ ಸಂದರ್ಭದಲ್ಲಿ ಬರುವುದು ಮರ ಗಿಡ ಬಳ್ಳಿಗಳು ತೊಳೆದ ರೀತಿಯಲ್ಲಿ ಮಳೆಯಿಂದ ನಳನಳಿಸುವುದು ನಗರಗಳಲ್ಲಿ ವಾಸಿಸುವವರು ಅಂಗಡಿಗೆ ಹೋದರೆ ಪ್ಯಾಂಟ್ ನೆಂದುಹೋಗುತ್ತೆ ಕಾರಿನಿಂದ ಹೋಗುವಾಗ ಸಿಡಿಯುವುದು ಬಿಸಿಲನ್ನು ಕಾಣುವ ತವಕದಲ್ಲೇ ಮನಸಲ್ಲೇ ಮಂಡಿಗೆ ತಿನ್ನಬೇಕು ಮಳೆಯ ಕಾರಣ ಯುದ್ಧಕ್ಕೆ ಹೊರಟಂತೆ ಕೋಟು ಸ್ವೆಟ್ಟರಿನ ವೇಷಭೂಷಣ ಬಿಸಿ ಚುರುಮುರಿ ಕಡಲೆ ಇತ್ಯಾದಿ ಕುರುಕಲು ತಿನ್ನುತ್ತಾ ರೇಡಿಯೋದಲ್ಲಿ ಸಂಗೀತ ಕೇಳಿ ರಾತ್ರಿಯ ಬಿಸಿಯೂಟ ತಿಂದು ಮಲಗಿದರೆ ಬೆಕ್ಕು ಒಲೆಯ ಬದಿಯಲ್ಲಿ ಕೂತು ಚಳಿ ಕಾಯಿಸುತ್ತದೆ

**IV  ಈ ಕೆಳಗಿನ ಎರಡು ಪ್ರಶ್ನೆಗಳಿಗೆ ಹತ್ತು ವಾಕ್ಯಗಳಲ್ಲಿ ಉತ್ತರಿಸಿ. (ಓದು ಪಠ್ಯ).** **(2×5-10)**

1) ಮಗುವಿನ ನಗುವಿನಿಂದ ಸುಬ್ಬನಲ್ಲಿ ಮೂಡಿದ ಭಾವನೆಗಳೇನು  ತಿಳಿಸಿ

ಹಾಲಕ್ಕ್‘ರ ಸಮುದಾಯದಲ್ಲಿ ಸಣ್ಣ ಎಂಬುವವನು ಒಂದು ಊರಿನಲ್ಲಿ ಪುಟ್ಟ ಗುಡಿಸಲಲ್ಲಿರುವ ಮಗುವನ್ನು ತೆಗೆದುಕೊಂಡು ಯಜಮಾನನಿಗೆ ಒಪ್ಪಿಸುತ್ತಾನೆ. ಯಜಮಾನ ತನಗೆ ಬೇಕಾದ ಭಾಗವನ್ನು ಕಚ್ಚಿ ತದನಂತರ ಗುಂಪಿಗೆ ಕೊಡುವುದು ವಾಡಿಕೆ ಹೀಗೆ ಮಗು ಆತನನ್ನು ಕಂಡು ನಕ್ಕಾಗ ಆ ಮಗುವಿನ ನಗು ಆತನನ್ನು ವಿಚಲಿತನನ್ನಾಗಿಸಿ ಅರಿಯದೆ ದುಃಖ ಕಣ್ಣೀರು ಬರಲಾಗಿ ತಾವು ಇಷ್ಟು ದಿನ ಮಾಡುತ್ತಿದ್ದ ಪಾಪದ ಕೆಲಸ  ಅರಿವಾಗಿ ಮುಂದೆ ಇಂತಹ ಅನಾಗರಿಕ ಜೀವಭಕ್ಷಣವನ್ನು ಬಿಡೋಣ ಎಂದು ನಿರ್ಧರಿಸಿದನು

2) ರಾಷ್ಟ್ರೀಯತೆಯನ್ನು ವ್ಯಕ್ತಪಡಿಸುವಲ್ಲಿ ಧರ್ಮದ ಪಾತ್ರವೇನು ?

ರಾಷ್ಟ್ರೀಯತೆ ಮೀರಿ ಧರ್ಮಕ್ಕೆ ನಿಷ್ಠರಾಗುವುದರ ಕುರಿತು….. ಯಹೂದಿಯ ಹತ್ಯಾಕಾಂಡ ಉದಾಹರಣೆ. ಭಾರತ ಪಾಕಿಸ್ತಾನದ ಉದಾಹರಣೆ. ಆದರೆ ಧರ್ಮ ಮುಂದೆ ಅಂತಿಮ ನಿರ್ದೇಶನವಲ್ಲ . ಅರಬ್ ಮತ್ತು ಪಶ್ಚಿಯನ್ ಸಂಸ್ಕೃತಿಗಳ ಮೂಲಭೂತ

ವ್ಯತ್ಯಾಸಗಳು ಇರಾನ್ ಇರಾಕ್ ಕಲಹಕ್ಕೆ ಕಾರಣ ,ಅಂತರಾಷ್ಟ್ರೀಯ ಒಪ್ಪಂದದ ನಂಬಿಕೆ ಇರುವ ಕಮ್ಯುನಿಸಂ ಕೂಡ ರಷ್ಯಾ ಮತ್ತು ಚೀನಾ ಗಳನ್ನು ಒಂದುಗೂಡಿಸಿಲ್ಲ ಈ ಹಿನ್ನೆಲೆಯಲ್ಲಿ ಇವೆಲ್ಲವೂ ಸಾಪೇಕ್ಷಗಳು ಯಾವುದಕ್ಕೆ ಹೊರಗಿನಿಂದ ಗಂಡಾಂತರವಿದೆ ಎಂದು ಅನಿಸುತ್ತದೆ ಆವಾಗ ಅದು ಜಾಗೃತವಾಗುತ್ತದೆ.

3) ಅಪಘಾತದ ನಂತರದ ಸುಧಾಳ ಬದುಕನ್ನು ಕುರಿತು ಬರೆಯಿರಿ.

ಅಪಘಾತದ ನಂತರ ಒಂದೆರಡು ವರ್ಷಗಳ ಸತತ ಪ್ರಯತ್ನದಿಂದ ರಿಪು ಸುಧಾಳಲ್ಲಿ ಪರಿವರ್ತನೆ ತರಲು ಪ್ರಯತ್ನಿಸುತ್ತಾನೆ. ಮೆದುಳು ಹಾನಿಯಾದ ಕಾರಣ ಭಾಷೆ ,ಬರವಣಿಗೆ ,ತನ್ನ ಕೆಲಸ ನಿರ್ವಹಿಸುವುದು ಹೀಗೆ ಎಲ್ಲವನ್ನು ಕಲಿಸುತ್ತಾ ಅವರ ನೆನಪನ್ನು ಮರುಕಳಿಸುವ ಪ್ರಯತ್ನ ಮಾಡುತ್ತಾನೆ ಸುಧಾಳ ತವರಿಗೆ, ಪಂಜಾಬಿನ ತನ್ನ ನೆಲಕ್ಕೆ ಕರೆದೊಯ್ಯುತ್ತಾನೆ ಬದುಕಿನ ಹೊಸ ಪ್ರಾರಂಭವನ್ನು ಮಾಡಿ ಭರವಸೆಯೊಂದಿಗೆ ನಡೆಸುತ್ತಾರೆ.

4. ರಾಜನನ್ನು ಮಗಳು ಏನೆಂದು ಕೇಳಿದಳು ? ವಿವರಿಸಿ

ಒಂದು ಪಟ್ಟಣವನ್ನು ಆಳುವ ದೊರೆಗೆ ಆರು ಗಂಡು ಮಕ್ಕಳಿದ್ದು ಒಂದೇ ಒಂದು ಹೆಣ್ಣು ಮಗಳಿದ್ದು ಆಕೆಯನ್ನು ನರ ಮನುಷ್ಯರು ನೋಡದ ಹಾಗೆ 12 ಅಂತಸ್ತಿನ ಮಹಡಿ ಮಾಡಿ ಅದರಲ್ಲಿ ಹೂವ ಮುಡಿಸಲು ಒಬ್ಬಳು, ತಲೆ ಬಾಚಲು ಒಬ್ಬರು, ಊಟ ತೆಗೆದುಕೊಂಡು ಹೋಗಲು ಒಬ್ಬರು ಹೀಗೆ ಪ್ರತಿಯೊಂದು ಬೇರೆ ಬೇರೆ ಆಳುಗಳನ್ನು ನೇಮಿಸಿದಾಗ ತಾನು ಹೀಗೆ ಇದ್ದು ಇದ್ದು ಬೇಸರಿಕೆ ಬಂದುದಾಗಿ ಅದಕ್ಕಾಗಿ ಊರಲ್ಲಿ ಕಥೆ ಹೇಳಿಸುವಂತೆ ಅಪ್ಪನನ್ನು ಕೇಳಿದಳು